ನದಿಯ ನೀರೂ ತೀರ್ಥವಲ್ಲ. ಸಕಲ ಪಾಪವನ್ನು ಮಾಡಿ, ಒಂದು ಮುಳುಗು ಹಾಕಿದರೆ ನಿಮ್ಮ ಪಾಪ ತೊಳೆದು ಹೋಗುವುದಿಲ್ಲ' ಎಂದು ಸಾರಿದರು. ಜೊತೆಗೆ ತಮ್ಮ ಮಾತುಗಳಿಗೆ ವೇದ ಉಪನಿಷತ್ತುಗಳ ಪ್ರಮಾಣಗಳನ್ನು ಉಲ್ಲೇಖಿಸಿ ಹೇಳುತ್ತಿದ್ದರು. ಗಂಗಾಸ್ನಾನದಿಂದಲೇ ಮುಕ್ತಿ ಸಿಗುವುದು ಎಂದು ವಾದಿಸಿದ ಆಚಾರ್ಯರಿಗೆ, 'ಗಂಗೆಯಲ್ಲಿ ಮುಳುಗಿದರೆ ತೊಳೆದು ಹೋಗಲು, ಪಾಪ ಮೈಗಂಟಿದ ಕೊಳೆಯಲ್ಲ. ಅದು ಆತ್ಮನ ಮೇಲಾದ ಸಂಸ್ಕಾರ. ಆ ಸಂಸ್ಕಾರವನ್ನು ಉತ್ತಮ ಕರ್ಮ ಮಾಡಿ ತೊಳೆಯಲಾದೀತೇ ಹೊರತು, ನದಿಯಲ್ಲಿ ಮುಳುಗಿ ಅಥವಾ ಮೂರ್ತಿಗಳನ್ನು ಪೂಜಿಸಿ ತೊಳೆಯಲಾಗುವುದಿಲ್ಲ' ಎಂದು ಬೋಧಿಸಿದ್ದರು.

ತಮ್ಮ ಹೊಟ್ಟೆ ಪಾಡಿಗೆ, ತಮ್ಮ ವೈಭವದ ಜೀವನಕ್ಕೆ ದಯಾನಂದರ ಸತ್ಯದ ಮಾತುಗಳು ಬುಡಕ್ಕೆ ಕೊಡಲಿಯಾಗಲಿವೆ ಎಂದು ಅರಿತ ಅನೇಕರು 'ಈತ ಹಿಂದೂವೇ ಅಲ್ಲ. ಯಾರೋ ಹಿಂದೂ ಸನ್ಯಾಸಿಯ ವೇಷದಲ್ಲಿ ಇರುವ ಕ್ರೈಸ್ತನೋ ಮುಸಲ್ಮಾನನೋ ಇರಬೇಕು' ಎಂದು ಅಪಪ್ರಚಾರ ಮಾಡಿದರು. ಜಗವ ಎದುರಿಸಿ ನಿಲ್ಲುವ ಸ್ಥೈರ್ಯ ನಿರ್ಭಯ ದಯಾನಂದರಿಗಿತ್ತು. ಇಂತಹ ಪರಿಸರದಲ್ಲಿಯೂ ಬಹಳಷ್ಟು ಸಾಮಾನ್ಯ ಜನರಿಗೆ ದಯಾನಂದರ ಮಾತುಗಳು ತಲುಪಿದ್ದವು.

## ಸರ್ವಶಕ್ತನಿಗೆ ಇಟ್ಟಿಗೆಯ ಮನೆಯೇಕೆ?

'ಸರ್ವವ್ಯಾಪ್ತಿಯಾದ ದೇವರನ್ನು ಒಂದು ವಿಗ್ರಹದಲ್ಲಿ ಕಟ್ಟಿ ಇಡುವ ಪ್ರಯತ್ನವೇ ತಪ್ಪು' ಎಂಬುದು ದಯಾನಂದರ ವಾದವಾಗಿತ್ತು. 'ದೇವಾಲಯಗಳನ್ನು ಕಟ್ಟುವುದರಿಂದ ಪುಣ್ಯ ಬಾರದು. ಶಾಲೆಗಳನ್ನು ಕಟ್ಟಿಸಿ' ಎನ್ನುವ ಅವರ ಮಾತು ಎಲ್ಲರಿಗೂ ತಾಕದಿದ್ದರೂ, ಅನೇಕರಿಗೆ ಅವರ ಮಾತಿನ ಸತ್ಯ ಅರ್ಥವಾಗಿತ್ತು. ಪನ್ನೀಲಾಲ ಸೇಠ್ ಎಂಬಾತ ದೇವಾಲಯ ಕಟ್ಟಿಸಲು ಇಟ್ಟುಕೊಂಡಿದ್ದ ಹಣದಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದನು. ದಯಾನಂದರು ಹೋದಲ್ಲೆಲ್ಲ ದೇವಾಲಯಗಳಲ್ಲಿ ವಿದ್ಯಾಲಯಗಳನ್ನು ಸ್ಥಾಪಿಸಲು ಕರೆಕೊಟ್ಟರು.

ಕಾನಪುರದಲ್ಲಿ ಸ್ವಾಮಿ ಬ್ರಹ್ಮಾನಂದನೆಂಬ ಸನ್ಯಾಸಿಯಿಂದ ಪ್ರೇರಿತನಾಗಿ ಗುರುಪ್ರಸಾದನೆಂಬ ಸೇಠನು 'ಕೈಲಾಸ' ಮತ್ತು 'ವೈಕುಂಠ' ಎಂಬ ಎರಡು ಮಂದಿರಗಳನ್ನು ಆ ಕಾಲಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿದ್ದನು. ಈ ಎರಡೂ ಮಂದಿರಗಳಿಂದ ಬ್ರಹ್ಮಾನಂದನಿಗೆ ಬಹಳ ಲಾಭವಿತ್ತು. ಒಮ್ಮೆ ದಯಾನಂದರ ಕೀರ್ತಿಯನ್ನು ಕೇಳಿ ಗುರುಪ್ರಸಾದ ಅವರ ದರ್ಶನಕ್ಕೆ ಬಂದನು. ದಯಾನಂದರು ನೇರವಾಗಿ, 'ಶ್ರೀಮಂತರೇ ನೀವು ಸರ್ವದಾತನೂ ಆದ ಪರಮಾತ್ಮನನ್ನು ಉದ್ಧರಿಸ ಹೊರಟು ಲಕ್ಷಾಂತರ ರೂಪಾಯಿಗಳನ್ನು ಕಲ್ಲು ಮಣ್ಣು ಇಟ್ಟಿಗೆಗಳ ಮೇಲೆ ಸುರಿದುಬಿಟ್ಟಿರಿ. ಯಾರಿಗೆ ನಿಜವಾದ ನಿಮ್ಮ ಸಹಾಯ ಬೇಕೋ, ಆ ಮಾನವರನ್ನೂ ಇತರ ಜೀವರನ್ನೂ ಮರೆತು ಯಾವ ಸರ್ವಶಕ್ತನು, ಸೂರ್ಯ ಚಂದ್ರ ನಕ್ಷತ್ರಾದಿ ಅದ್ಭುತಗಳನ್ನು ಸೃಷ್ಟಿಸಿದ್ದಾನೆಯೋ ಆ ಪ್ರಭುವಿಗೆ ಮನೆ ಕಟ್ಟಿಸಿಕೊಡಲು ಹೊರಟಿರಿ' ಎಂದು ಹೇಳಿದರು. ಆ ಶ್ರೀಮಂತನಿಗೆ ಚಾಟಿಯ ಏಟಿನ ಪೆಟ್ಟು ತಿಂದ ಹಾಗೆ ಆಗಿತ್ತು.

ಊರಿಂದೂರಿಗೆ ದಯಾನಂದರ ಪಯಣ, ಪ್ರವಚನ, ವೇದಗಳ ಜ್ಞಾನದ ಪ್ರಸಾರ, ಜಾತಿಪದ್ಧತಿಯ ವಿರುದ್ಧ ಉಪದೇಶ, ಎಲ್ಲ ಜಾತಿಯ ಜನರಿಗೂ ವೇದಗಳ ಜ್ಞಾನವನ್ನು ಕೈಗಿಡುವುದು, ಶಾಸ್ತ್ರಾರ್ಥಕ್ಕೆ ಬಂದ ಪಂಡಿತರುಗಳಿಗೆ ಆಗುತ್ತಿದ್ದ ಸೋಲು – ಇವೆಲ್ಲವೂ ಅವರಿಗೆ ಸಾವಿರ ಸಾವಿರ ಜನರ ಗೌರವವನ್ನು ತಂದು ಕೊಟ್ಟವು. ನೂರಾರು ಜನ ತಮ್ಮಲ್ಲಿದ್ದ ವಿಗ್ರಹಗಳನ್ನು ಗಂಗೆಯಲ್ಲಿ ಮುಳುಗಿಸಿ ಬಂದರು. ಆದರೆ ಹಲವು ಧೂರ್ತರು, ಅವರ ಜೀವದ ಮೇಲೆ ಹಲ್ಲೆ ಮಾಡಿಸುವುದನ್ನು ನಿಲ್ಲಿಸಲಿಲ್ಲ.

## 'ನೀವು ಹೊರಡಿ ಇಲ್ಲಿಂದ'

ಪಂಜಾಬಿನಲ್ಲಿ ದಯಾನಂದರ ಪ್ರಭಾವ ಹೆಚ್ಚಿತು. ಪೌರಾಣಿಕರ ಚಿಂತೆ ಪ್ರಬಲವಾಯಿತು. ದಯಾನಂದರನ್ನು ಕುರಿತು ಅಪಪ್ರಚಾರಕ್ಕೆ ಇಳಿದರು. ಲಾಹೋರಿನಲ್ಲಿ ಅವರನ್ನು ಆಹ್ವಾನಿಸಿದ್ದ ಆತಿಥೇಯರಾದ ರತನ್‌ಚಂದ್, 'ನೀವು ಹೊರಡಿ ಇಲ್ಲಿಂದ' ಎಂದು ಏಕಾಏಕಿ ಹೇಳಿದ್ದರು. ಸ್ವಲ್ಪವೂ ಮನಸ್ಸನ್ನು ಕಹಿ ಮಾಡಿಕೊಳ್ಳದೆ, 'ದೇವರು ನಿನಗೆ ಒಳ್ಳೆಯದು ಮಾಡಲಿ, ಇದೋ ಹೊರಟೆ' ಎಂದು ದಯಾನಂದರು ನುಡಿದಿದ್ದರು. ಇಂತಹ ಸಮಯದಲ್ಲಿ ಓರ್ವ ಮುಸಲ್ಮಾನ ಸಜ್ಜನ ದಯಾನಂದರ ಬಳಿಗೆ ಬಂದು, 'ಮಹಾರಾಜ್, ನನ್ನ ವಿಶಾಲವಾದ ಬಂಗಲೆಯಲ್ಲಿ ತಾವು ಶಿಷ್ಯ ಸಮೇತರಾಗಿ ಮನ ಬಂದಷ್ಟು ಕಾಲ ನೆಲೆಸಿ, ವೇದ ಪ್ರಚಾರ ಮಾಡಿರಿ' ಎಂದು ಪ್ರಾರ್ಥಿಸಿದನು. ಆ ಉದಾರ ಮನಸ್ಸಿನಾತ ಖಾನ್‌ಬಹಾದುರ್ ಡಾಕ್ಟರ್ ರಹೀಂಖಾನ್. ಆತನ ಬಂಗಲೆಯಲ್ಲಿಯೇ ದಯಾನಂದರ ಉಪದೇಶ ಮುಂದುವರೆಯಿತು. ಸಾವಿರಾರು ಸಂಖ್ಯೆಯಲ್ಲಿ ಜನರು ಬಂದು ಕೇಳಿದರು. ಮುಂದೆ 1877ರಲ್ಲಿ ದಯಾನಂದರು ಅಮೃತಸರಕ್ಕೆ ತೆರಳಿದಾಗ, ಮಿಯಾ ಮಹಮ್ಮದ್ ಜಾನರ ಬಂಗಲೆಯಲ್ಲಿ ಇಳಿದುಕೊಂಡರು.

ದಯಾನಂದರು ತಮ್ಮ ಅಭಿಪ್ರಾಯವನ್ನು ನೇರವಾಗಿ ಹೇಳುವುದರಿಂದ ಅವರ ಅನುಯಾಯಿಗಳ ಸಂಖ್ಯೆ ಹೆಚ್ಚಿದಂತೆ, ಅವರನ್ನು ದ್ವೇಷಿಸುವ ವೈರಿಗಳ ಸಂಖ್ಯೆಯೂ ಹೆಚ್ಚುತ್ತಿತ್ತು.

## ಸಾವು ಕಾದಿತ್ತು

ದಯಾನಂದರ ಇಡೀ ಬದುಕಿನ ಪರಿಶ್ರಮ ಭಾರತದ ಒಡಕುಗಳನ್ನು ಮುಚ್ಚಿ, ನಮ್ಮನ್ನು ಒಂದಾಗಿ ಬಾಳುವಂತೆ ಮಾಡುವುದಾಗಿತ್ತು. ಅವರ ಈ ಪ್ರಯತ್ನಕ್ಕೆ ಜನ ಅವರನ್ನು ಲಾಠಿಗಳಿಂದ ಹೊಡೆದರು. ಕಲ್ಲು ಇಟ್ಟಿಗೆಗಳನ್ನು ಎಸೆದರು. ಅವರ ಕುಟೀರಕ್ಕೆ ಬೆಂಕಿ ಹಚ್ಚಿದವರಿದ್ದರು. ಹಲವಾರು ಬಾರಿ ವಿಷ ಪ್ರಯೋಗವಾಗಿತ್ತು. ಇಷ್ಟೆಲ್ಲದರ ನಡುವೆ ಅವರು ಅಷ್ಟು ಕಾಲ ಬದುಕಿ ಉಳಿದದ್ದೇ ಅಚ್ಚರಿ. ಆದರೆ ಅವರ 59ನೇ ವಯಸ್ಸಿನಲ್ಲಿ ನಡೆದ ವಿಷ ಪ್ರಯೋಗ ಅವರ ಜೀವವನ್ನು ತೆಗೆದುಕೊಂಡಿತು.

ಇಸವಿ 1883, ಮಾರವಾಡದ ಜಸವಂತಸಿಂಹನ ಆಹ್ವಾನವನ್ನು ಮನ್ನಿಸಿ ಹೊರಟರು. ರಾಜಾ ಜಸವಂತಸಿಂಹ ನನ್ನೀಜಾನಳೆಂಬ ವಾರಾಂಗನೆಯಲ್ಲಿ ಆಸಕ್ತನಾಗಿದ್ದು, ರಾಜ್ಯಭಾರವನ್ನು ಮರೆತಿದ್ದ. ದಯಾನಂದರ ಹಿತೈಷಿಗಳು, 'ತಾವು ಹೋಗುತ್ತಿರುವುದು ವೇಶ್ಯಾಸಕ್ತ ರಾಜನ ಪ್ರದೇಶಕ್ಕೆ,




**ಆರ್ಯಸಮಾಜ ಸದ್ದಿಲ್ಲದೆ ಜನರನ್ನು ಮನುಜಮತಕ್ಕೆ ತರಲು ಯತ್ನಿಸುತ್ತಿದೆ. ಆಳವಾಗಿ ಬೇರುಬಿಟ್ಟ ಅಸಮಾನತೆ, ಜಾತೀಯತೆಯ ನಮ್ಮ ಸಮಾಜದಲ್ಲಿ ಇಂತಹ ಸಂಸ್ಥೆಗಳ ಅಗತ್ಯವಿದೆ.**